# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 199
2. ಸದಸ್ಯರ ಹೆಸರು : ಡಾ॥ ವೈ.ಎ. ನಾರಾಯಣಸ್ವಾಮಿ
3. ಉತ್ತರಿಸುವ ದಿನಾಂಕ : 03-03-2020
4. ಉತ್ತರಿಸುವವರು : ಮಾನ್ಯ ನಗರಾಭಿವೃದ್ಧಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ತ್ಯಾಜ್ಯ ವಿಲೇವಾರಿ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಮಾಧ್ಯಮದಲ್ಲಿ ನಿತ್ಯ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು? | ಬಂದಿದೆ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಘನತ್ಯಾಜ್ಯ ನಿರ್ವಹಣಾ ನಿಯಮ-2016ರನ್ವಯ ವಿಲೇವಾರಿ ಮಾಡಲು ಕೈಗೊಳ್ಳಲು ಸಾಕಷ್ಟು ಪ್ರಯತ್ನಿಸುತ್ತಿದ್ದು, ಆದರೂ ಸಹ ಈ ಕುರಿತಂತೆ ಮಾಧ್ಯಮದಲ್ಲಿ ವಿಷಯಗಳು ಬಿತ್ತರಗೊಳ್ಳಲು ಈ ಕೆಳಕಂಡ ಅಂಶಗಳು ಮೂಲ ಕಾರಣವಾಗಿರುತ್ತವೆ.<br><br>1. ಸಾರ್ವಜನಿಕರು ತಮ್ಮಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಪಾಲಿಕೆಯ ವಾಹನಗಳಿಗೆ ನೀಡದೇ ಸಹಕರಿಸದೇ ಇರುವುದು.<br>2. ತ್ಯಾಜ್ಯ ಉತ್ಪಾದಕರು ವಿಂಗಡಿಸಿದ ಮಾದರಿಯಲ್ಲಿ ತ್ಯಾಜ್ಯವನ್ನು ನೀಡದೇ ಇರುವುದು.<br>3. ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯರವರ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012, ಬೆಂಗಳೂರು ದಿನಾಂಕ: 11.03.2016 ರನ್ವಯ ಪ್ಲಾಸ್ಟಿಕ್ ಬಳಕೆಯನ್ನು ನಿಷೇದಿಸಲಾಗಿದ್ದರೂ ಸಹ, ಪ್ಲಾಸ್ಟಿಕ್ ಉತ್ಪಾದನೆಯನ್ನು ಸಂಪೂರ್ಣವಾಗಿ ತಡೆಗಟ್ಟದೇ ಇರುವುದು ಹಾಗೂ ಸಾರ್ವಜನಿಕರು ಎಲ್ಲಾ ರೀತಿಯ ದಿನಬಳಕೆಯ ಖರೀದಿಯಲ್ಲಿ ಪ್ಲಾಸ್ಟಿಕ್ ಉಪಯೋಗಿಸುತ್ತಿರುವುದು.<br><br><u>ರಾಜ್ಯದ ಮಹಾನಗರ ಪಾಲಿಕೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ:</u><br><br>ಹೌದು<br>ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು, 2016ರ ರೀತ್ಯಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ |

| | | |
|---|---|---|
| | | ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ವಿಂಗಡಣೆ, ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಹಾಗೂ ವಿಲೇವಾರಿ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತವೆ. ಆದರೆ ಕೆಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಾನವ ಸಂಪನ್ಮೂಲದ ಕೊರತೆ, ತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ವಾಹನ ಯಂತ್ರೋಪಕರಣಗಳ ಕೊರತೆ, ತ್ಯಾಜ್ಯ ಸಂಸ್ಕರಣೆ ಅಗತ್ಯವಿರುವ ಜಾಗ ಹೊಂದಲು ಸಾಧ್ಯವಾಗಿರುವುದಿಲ್ಲ ಹಾಗು ತ್ಯಾಜ್ಯ ನಿರ್ವಹಣೆಯಲ್ಲಿ ಸಾರ್ವಜನಿಕರ ಸಹಭಾಗಿತ್ವದ ಕೊರತೆಯಿಂದಾಗಿ ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡುವುದರಲ್ಲಿ ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಆದ್ದರಿಂದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಘನತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ಮೂಲಭೂತ ಸೌಕರ್ಯ, ಮಾನವ ಸಂಪನ್ಮೂಲ, ವಾಹನ ಯಂತ್ರೋಪಕರಣಗಳನ್ನು ಖರೀದಿಸಲು ಅಗತ್ಯ ಅನುದಾನವನ್ನು ವಿವಿಧ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನಗಳಿಂದ ಭರಿಸಿ ಬಿಡುಗಡೆ ಮಾಡಲಾಗಿದೆ ಹಾಗು ಐ.ಇಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರನ್ನು ತೊಡಗಿಸಿಕೊಂಡು ತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಕ್ರಮವಹಿಸಲಾಗುತ್ತಿದೆ. |
| ಆ) | ತ್ಯಾಜ್ಯ ವಿಲೇವಾರಿಗೆ ಯಾವುದಾದರೂ ಹೊಸ ಯೋಜನೆಗಳನ್ನು ಸರ್ಕಾರವು ಕೈಗೊಂಡಿದೆಯೇ; ಹೌದಾದರೇ, ಈ ಕುರಿತು ವಿವರ ನೀಡುವುದು; ಇಲ್ಲವಾದಲ್ಲಿ ಕಾರಣಗಳೇನು? | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.**<br><br>• ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತ್ಯಾಜ್ಯ ನಿರ್ವಹಣೆಯನ್ನು **"ಕ್ಲೀನ್ ಬೆಂಗಳೂರು"** ಎಂಬ ಶೀರ್ಷಿಕೆಯಡಿ ನಿರ್ವಹಿಸುತ್ತಿದ್ದು, ತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಿ ಸಂಗ್ರಹಿಸುವ ಕಾರ್ಯಕ್ಕೆ ಒತ್ತು ನೀಡಲಾಗಿರುತ್ತದೆ. ಆಯಾ ವಾರ್ಡ್‌ನ ತ್ಯಾಜ್ಯವು ಆಯಾ ವಾರ್ಡ್‌ನಲ್ಲಿಯೇ ವಿಲೇವಾರಿಯಾಗುವ ಮತ್ತು ಘನತ್ಯಾಜ್ಯದ ಸಮಸ್ಯೆಯನ್ನು ಸೂಕ್ತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಪಾಲಿಕೆಯು ಹಸಿತ್ಯಾಜ್ಯ, ಗೃಹ ಹಾನಿಕಾರಕ ತ್ಯಾಜ್ಯ (ನೈರ್ಮಲ್ಯ ತ್ಯಾಜ್ಯ), ಒಣತ್ಯಾಜ್ಯಗಳನ್ನಾಗಿ 03 ಬಗೆಗಳಲ್ಲಿ ವಿಂಗಡಿಸಿದ ರೂಪದಲ್ಲಿ ತ್ಯಾಜ್ಯ ಸಂಗ್ರಹಣೆ ಮಾಡಲು ದಿನಾಂಕ: 01–02–2017 ರಿಂದ ಕಡ್ಡಾಯಗೊಳಿಸಲಾಗಿರುತ್ತದೆ.<br><br>• ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವ ಸಲುವಾಗಿ ಪಾಲಿಕೆಯಲ್ಲಿ ಪ್ರತ್ಯೇಕವಾಗಿ **"ಘನತ್ಯಾಜ್ಯ ನಿರ್ವಹಣಾ ಕೋಶ"** ವನ್ನು ಸ್ಥಾಪಿಸಲಾಗಿದ್ದು, ಕೇಂದ್ರ, ವಲಯ ಹಾಗೂ ವಿಭಾಗ ಮಟ್ಟದಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿಯೇ ಪ್ರತ್ಯೇಕ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ವಿಭಾಗ ಮಟ್ಟದಲ್ಲಿ ಘನತ್ಯಾಜ್ಯ/ಕಿರಿಯ/ಹಿರಿಯ ಪರಿವೀಕ್ಷಕರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ವಲಯ ಮಟ್ಟದಲ್ಲಿ ಅಧೀಕ್ಷಕ ಅಭಿಯಂತರರು, |

ಮತ್ತು ಕೇಂದ್ರ ಮಟ್ಟದಲ್ಲಿ ಕಾರ್ಯಪಾಲಕ ಅಭಿಯಂತರರು, ಮುಖ್ಯ ಅಭಿಯಂತರರು, ಜಂಟಿ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ಹಾಗೂ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರು ಕಾರ್ಯನಿರ್ವಹಿಸುತ್ತಿರುತ್ತಾರೆ.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ನಗರದ ನಾಗರೀಕರ ಕುಂದು ಕೊರತೆಗಳನ್ನು ದಾಖಲಿಸಲು **"ಸಹಾಯ 2.0 ತಂತ್ರಾಂಶದ ಆ್ಯಪ್"** ಅನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಪಾಲಿಕೆಗೆ ಸಂಬಂಧಿಸಿದ ವಿವಿಧ ಮಾದರಿಯ ಸಾರ್ವಜನಿಕರ ದೂರುಗಳನ್ನು ನಿರ್ದಿಷ್ಟ ಅವಧಿಯಲ್ಲಿ ಬಗೆಹರಿಸಲು ಸಂಬಂಧಪಟ್ಟ ಅಧಿಕಾರಿಗಳ ಮೊಬೈಲ್‌ಗಳಿಗೆ ಸ್ವಯಂಚಾಲಿತವಾಗಿ ದೂರಿನ ಸ್ಥಳದ ಗೂಗಲ್ ನಕ್ಷೆಯನ್ನೊಳಗೊಂಡಂತೆ ತಲುಪುವಂತೆ ಹಾಗೂ ಪಾಲಿಕೆಯ ಅಧಿಕಾರಿಗಳು ನೋಂದಾಯಿತ ದೂರುಗಳನ್ನು ಪರಿಹರಿಸಿದ ನಂತರ ಛಾಯಾಚಿತ್ರವನ್ನು ಸಾರ್ವಜನಿಕರಿಗೆ ತಲುಪಿಸುವಂತಹ ಅವಕಾಶವನ್ನು ಆ್ಯಪ್‌ನಲ್ಲಿ ಕಲ್ಪಿಸಲಾಗಿರುತ್ತದೆ. ಸಮಯ ಮೀರಿದ ದೂರುಗಳನ್ನು ಮೇಲಾಧಿಕಾರಿಗಳಿಗೆ ಸ್ವಯಂಚಾಲಿತವಾಗಿ ತಲುಪುವಂತಹ ವ್ಯವಸ್ಥೆಯನ್ನು ಸದರಿ ಆ್ಯಪ್‌ನಲ್ಲಿ ಕಲ್ಪಿಸಲಾಗಿದೆ.
- ಬೆಂಗಳೂರು ನಾಗರಿಕರು ವಿವಿಧ ಇಲಾಖೆಗಳಿಗೆ ಸಲ್ಲಿಸಬೇಕಾದ ದೂರುಗಳನ್ನು ಒಂದೇ ತಂತ್ರಾಂಶದ ಮೂಲಕ ದಾಖಲಿಸಲು **"ನಮ್ಮ ಬೆಂಗಳೂರು"** ಎನ್ನುವ ತಂತ್ರಾಂಶವನ್ನು ಪಾಲಿಕೆ ವತಿಯಿಂದ ಸಿದ್ದಪಡಿಸಲಾಗಿದ್ದು, ಇದರಲ್ಲಿ ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ, ಬೆಸ್ಕಾಂ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಂಆರ್‌ಸಿಎಲ್, ಬಿಡಿಎ, ಬಿಎಮ್‌ಆರ್‌ಡಿಎ ಹಾಗೂ ಬಿಎಂಟಿಸಿ ಇಲಾಖೆಗಳ ದೂರು ದಾಖಲಾತಿ ತಂತ್ರಾಂಶಗಳನ್ನು **"ನಮ್ಮ ಬೆಂಗಳೂರು"** ತಂತ್ರಾಂಶಕ್ಕೆ ಸಮೀಕರಣಗೊಳಿಸಲಾಗಿರುತ್ತದೆ. ಈ ತಂತ್ರಾಂಶವು ಸಾರ್ವಜನಿಕರಿಗೆ ವಿವಿಧ ದೂರುಗಳನ್ನು ದಾಖಲಿಸಲು ಒಂದೇ ವೇದಿಕೆಯನ್ನು ಕಲ್ಪಿಸಿಕೊಡುತ್ತದೆ ಹಾಗೂ ಸಾರ್ವಜನಿಕರು ಈ ತಂತ್ರಾಂಶದಲ್ಲಿ ಲಿಖಿತ, ಛಾಯಾಚಿತ್ರ ಹಾಗೂ ವಿಡಿಯೋ ಮೂಲಕ ದೂರಿನ ವಿವರಗಳನ್ನು ದಾಖಲಿಸಿವುದಲ್ಲದೆ ಅದರ ಸಂಪೂರ್ಣ ಸ್ಥಿತಿಗತಿಗಳನ್ನು ವೀಕ್ಷಿಸಬಹುದಾಗಿದೆ.
- ಪಾಲಿಕೆಯು ಆಯಾ ವಾರ್ಡ್‌ನ ತ್ಯಾಜ್ಯವನ್ನು ಆಯಾ ವಾರ್ಡ್‌ನಲ್ಲಿಯೇ ವಿಲೇವಾರಿಗೊಳಿಸುವ ನಿಟ್ಟಿನಲ್ಲಿ ವಾರ್ಡ್‌ಗೊಂದರಂತೆ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ನಿರ್ಮಿಸಲಾಗಿರುತ್ತದೆ. ಹಾಲಿ ಒಟ್ಟು 166 ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ನಿರ್ಮಿಸಿ ಚಿಂದಿ ಆಯುವವರಿಗೆ ಉತ್ತೇಜನ ನೀಡುವ ಸಲುವಾಗಿ ನಿರ್ವಹಣೆಗಾಗಿ ವಹಿಸಲಾಗಿರುತ್ತದೆ. ಉಳಿದ

| | | |
|---|---|---|
| | | ವಾರ್ಡ್‌ಗಳಲ್ಲಿಯೂ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ.<br>• ಹಸಿತ್ಯಾಜ್ಯ ಸಂಸ್ಕರಣೆ ಮಾಡಿ ಗೊಬ್ಬರಗೊಳಿಸಲು ಕನ್ನಹಳ್ಳಿ, ಸೀಗೆಹಳ್ಳಿ, ದೊಡ್ಡಬಿದರಕಲ್ಲು, ಚಿಕ್ಕನಾಗಮಂಗಲ, ಮಾವಳ್ಳಿಪುರ, ಸುಬ್ಬರಾಯನಪಾಳ್ಯ ಲಿಂಗಧೀರನಹಳ್ಳಿ ಹಾಗೂ ಕೆ.ಸಿ.ಡಿ.ಸಿ ಸಂಸ್ಕರಣ ಘಟಕಗಳನ್ನು ನಿರ್ಮಿಸಲಾಗಿದೆ. ಸದರಿ ಘಟಕಗಳಿಂದ ಪ್ರತಿದಿನ ಸುಮಾರು 600 ರಿಂದ 700 ಟನ್ ಹಸಿತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರಗೊಳಿಸಲಾಗುತ್ತಿದೆ. ಟಿಪ್ಪಿಂಗ್ ಫೀ ಆಧಾರದ ಮೇಲೆ ಖಾಸಗಿಯಾಗಿ ಎಂ.ಎಸ್.ಜಿ.ಪಿ., ಘಟಕಕ್ಕೆ 500 ರಿಂದ 550 ಟನ್ ತ್ಯಾಜ್ಯವನ್ನು ಪ್ರತಿದಿನ ಸಂಸ್ಕರಣೆಗಾಗಿ ರವಾನಿಸಲಾಗುತ್ತಿದೆ.<br>• ಸ್ಥಳ ಲಭ್ಯವಿರುವ ಕಡೆ **"ಜೈವಿಕ ಅನಿಲ ಉತ್ಪಾದನಾ ಘಟಕ"** ಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದ್ದು, ಹಾಲಿಯಾಗಿ 5 ಟನ್ ಸಾಮರ್ಥ್ಯದ 13 ಹಾಗೂ 10 ಟನ್ ಸಾಮರ್ಥ್ಯದ 01 ಘಟಕಗಳನ್ನು ನಿರ್ಮಿಸಿ, ಹಸಿತ್ಯಾಜ್ಯ ನಿರ್ವಹಣೆ ಮಾಡಲಾಗುತ್ತಿದೆ. 10 ಟನ್ ಸಾಮರ್ಥ್ಯದ ಇನ್ನು 4 ಘಟಕಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗುತ್ತಿದೆ.<br>• **ಘನತ್ಯಾಜ್ಯ ವಿಂಗಡಣೆಗೆ ಸಾರ್ವಜನಿಕರ ಸಹಭಾಗಿತ್ವ ಅವಶ್ಯಕವಾಗಿದ್ದು, ಈ ಹಿನ್ನೆಲೆಯಲ್ಲಿ ಈ ಅಂಶಗಳಿಗೆ ಪೂರಕವಾಗಿ ಯೋಜನೆಗಳನ್ನು ರೂಪಿಸಲಾಗಿದೆ.**<br>1. ಪ್ರತಿ ಬ್ಲಾಕ್‌ಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಪರಿವೀಕ್ಷಿಸಲು ಸದರಿ ಬ್ಲಾಕ್‌ಗಳಲ್ಲಿ ಆಸಕ್ತಿ ಹೊಂದಿರುವ ಸಾರ್ವಜನಿಕರನ್ನು ಬ್ಲಾಕ್‌ಗೆ 2 ರಂತೆ ಒಟ್ಟು 2000 "ಶುಚಿಮಿತ್ರ" ರನ್ನು ನಿಯೋಜಿಸಕೊಳ್ಳಲಾಗಿದೆ.<br>2. ಶುಚಿಮಿತ್ರರುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ತರಬೇತಿ ನೀಡಲು ಸಾರ್ವಜನಿಕರಲ್ಲಿಯೇ ಪರಿಣಿತಿ ಹೊಂದಿರುವ 600 ಅಭ್ಯರ್ಥಿಗಳನ್ನು ಮಾಸ್ಟರ್ ಟ್ರೈನರ್ಸ್‌ಗಳಾಗಿ ನಿಯೋಜಿಸಲಾಗಿದೆ.<br>3. ಪಾಲಿಕೆಯ ವ್ಯಾಪ್ತಿಯ ಶಾಲೆಗಳಲ್ಲಿ ಎಕೋ ಕ್ಲಬ್‌ಗಳನ್ನು ಜಾರಿಗೆ ತಂದಿದೆ. ಸದರಿ ಶಾಲಾ ಮಕ್ಕಳಿಂದ ಪೋಷಕರಿಗೆ ತ್ಯಾಜ್ಯ ವಿಂಗಡಣೆ, ಪ್ಲಾಸ್ಟಿಕ್ ಬಳಕೆ ಹಾಗೂ ಪರಿಸರ ನೈರ್ಮಲ್ಯವನ್ನು ಕಾಪಾಡುವುದರ ಕುರಿತು ಮನಮುಟ್ಟುವ ಬಗ್ಗೆ ಅರಿವು ತರಲಾಗಿದೆ.<br>4. ಶಾಲಾ ಮಕ್ಕಳನ್ನು ನಿಯೋಜಿಸಿಕೊಂಡು ತ್ಯಾಜ್ಯ ವಿಂಗಡಣೆ ಮತ್ತು ಪ್ಲಾಸ್ಟಿಕ್ ಬಳಕೆ ನಿಷೇಧದ ಕುರಿತು 250 ಜಾಥಗಳನ್ನು ಹಮ್ಮಿಕೊಳ್ಳಲಾಗಿದೆ.<br>5. ತ್ಯಾಜ್ಯ ವಿಂಗಡಣೆ ಮತ್ತು ಪ್ಲಾಸ್ಟಿಕ್ ಬಳಕೆ ನಿಷೇಧದ ಕುರಿತು 270 ಬೀದಿ ನಾಟಕಗಳನ್ನು |

| | | |
|---|---|---|
| | | ಹಮ್ಮಿಕೊಳ್ಳಲಾಗಿದೆ.<br>6. ಪ್ಲಾಸ್ಟಿಕ್ ನಿಷೇಧ ಹಾಗೂ ಪ್ಲಾಸ್ಟಿಕ್ ಬದಲಿಗೆ ಪರ್ಯಾಯ ವಸ್ತುಗಳ ಕುರಿತು 03 ದಿನಗಳ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.<br>7. ಪಾಲಿಕೆಯ ವಾರ್ಡ್ ಸಂಖ್ಯೆ: 174ರ ಪಾರ್ಕ್‌ನಲ್ಲಿ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ತ್ಯಾಜ್ಯ ನಿರ್ವಹಣೆ ಕುರಿತಂತೆ ಅರಿವು ಮೂಡಿಸುವ ಸಲುವಾಗಿ ಸ್ವಚ್ಛಗ್ರಹ ಕಲಿಕಾ ಕೇಂದ್ರವನ್ನು ನಿರ್ಮಿಸಲಾಗಿದ್ದು, ಸದರಿ ಕಲಿಕಾ ಕೇಂದ್ರವನ್ನು ಈವರೆವಿಗೂ ಸುಮಾರು 15000 ಜನ ವೀಕ್ಷಣೆ ಮಾಡಿರುತ್ತಾರೆ.<br>8. ವಾರ್ಡ್ ಸಂಖ್ಯೆ: 18ರಲ್ಲಿ ಸಾರ್ವಜನಿಕರ ಸಹಭಾಗಿತ್ವದಡಿ ಲೇನ್ ಕಾಂಪೋಸ್ಟಿಂಗ್ ಮುಖೇನ 420 ಮನೆಗಳ ಹಸಿತ್ಯಾಜ್ಯವನ್ನು ನಿರ್ವಹಣೆ ಮಾಡಲಾಗುತ್ತಿದೆ.<br>9. ವಾರ್ಡ್ ಸಂಖ್ಯೆ: 27–ಬಾಣಸವಾಡಿ ವ್ಯಾಪ್ತಿಯ ಬಿಡಿಎ ನಿರ್ಮಿತ ಹೆಚ್‌ಆರ್‌ಬಿಆರ್ ಬಡಾವಣೆಯ ವ್ಯಾಪ್ತಿಯಲ್ಲಿ ಸುಮಾರು 4200 ಮನೆಗಳಿಂದ ಮೂಲದಲ್ಲೇ ತ್ಯಾಜ್ಯ ವಿಂಗಡಣೆ ಮಾಡಿ ಒಣತ್ಯಾಜ್ಯವನ್ನು ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಕ್ಕೆ, ಹಸಿತ್ಯಾಜ್ಯವನ್ನು ಸದರಿ ಬಡಾವಣೆಯ ಪ್ರದೇಶದಲ್ಲಿ ಗೊಬ್ಬರಗೊಳಿಸುವಿಕೆಗೆ ಕ್ರಮವಹಿಸಲಾಗಿದೆ.<br>10. ಸಾರ್ವಜನಿಕರಿಗೆ ಘನತ್ಯಾಜ್ಯ ವಿಂಗಡಣೆ ಕುರಿತು ಅರಿವು ಮೂಡಿಸಲು ವಿಭಾಗಕ್ಕೆ 10–12 ರಂತೆ ಸಂಪರ್ಕ ಕಾರ್ಯಕರ್ತರನ್ನು ನಿಯೋಜಿಸಲಾಗುತ್ತಿದ್ದು, ಪ್ರಸ್ತುತ 360 ಸಂಪರ್ಕ ಕಾರ್ಯಕರ್ತರನ್ನು (ಲಿಂಕ್ ವರ್ಕರ್ಸ್) ನಿಯೋಜಿಸಿಕೊಳ್ಳಲಾಗುತ್ತಿದೆ. ಇವರು ಮನೆಮನೆಗೆ ತೆರಳಿ ಸಾರ್ವಜನಿಕರಿಗೆ ಘನತ್ಯಾಜ್ಯ ವಿಂಗಡಣೆ ಕುರಿತು ಅರಿವು ಮೂಡಿಸಲಿದ್ದಾರೆ.<br>11. ತ್ಯಾಜ್ಯ ಸಂಗ್ರಹಣೆ, ವಿಂಗಡಣೆ ಹಾಗೂ ಪ್ಲಾಸ್ಟಿಕ್ ಬಳಕೆ ನಿಷೇಧ ಕುರಿತು ಪತ್ರಿಕಾ ಮಾಧ್ಯಮ/ದೂರದರ್ಶನ/ರೇಡಿಯೋ ಮುಖೇನ ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ.<br>• **ಕಾಂಪೋಸ್ಟ್ ಸಂತೆ** – ಸಾರ್ವಜನಿಕರು ತಮ್ಮ ಮನೆಯಲ್ಲಿಯೇ ಹಸಿತ್ಯಾಜ್ಯವನ್ನು ಗೊಬ್ಬರವನ್ನಾಗಿ ಸಂಸ್ಕರಿಸಲು ಪ್ರೋತ್ಸಾಹಿಸಲಾಗುತ್ತಿದ್ದು, ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘಗಳ ಸಹಯೋಗದೊಂದಿಗೆ ಎಲ್ಲಾ ವಾರ್ಡ್‌ಗಳಲ್ಲಿ **ಕಾಂಪೋಸ್ಟ್ ಸಂತೆ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು,** ಈವರೆವಿಗೂ ಒಟ್ಟು 58 ಕಾಂಪೋಸ್ಟ್ ಸಂತೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ಸಂತೆಗೂ 1000– 1500 ಜನರು ಸೇರುತ್ತಿದ್ದು, ಜನರು ಇದರ ಬಗ್ಗೆ ಪ್ರಶಂಶಿಸಿ, ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ಹಸಿ ತ್ಯಾಜ್ಯದಿಂದ ಕಾಂಪೋಸ್ಟ್‌ನ್ನು ತಮ್ಮ ಮನೆಯಲ್ಲಿಯೇ ಮಾಡಿಕೊಳ್ಳಲು ಉತ್ಸಾಹ ತೋರಿಸಿರುತ್ತಾರೆ. |

| | | |
|---|---|---|
| | | • ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012, ದಿನಾಂಕ: 11.03.2016ರಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿದ್ದು, ಪ್ಲಾಸ್ಟಿಕ್‌ನಿಂದ ತಯಾರಿಸಿರುವ ಕ್ಯಾರಿ ಬ್ಯಾಗ್, ಭಿತ್ತಿಪತ್ರ, ತೋರಣ, ಫ್ಲೆಕ್ಸ್, ಬಾವುಟ, ತಟ್ಟೆ, ಲೋಟ, ಚಮಚ, ಕ್ಲಿಂಗ್‌ಫಿಲ್ಮ್ಸ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಾದಂತಹ ವಸ್ತುಗಳ ತಯಾರಿಕೆ, ಸರಬರಾಜು ಮತ್ತು ಬಳಕೆಯನ್ನು ನಿಷೇಧಿಸಲಾಗಿರುತ್ತದೆ ಹಾಗೂ ಕಾಲ ಕಾಲಕ್ಕೆ ಪಾಲಿಕೆ ಅಧಿಕಾರಿಗಳ ತಂಡಗಳು ವಾಣಿಜ್ಯ ಮಳಿಗೆಗಳಿಗೆ ದಾಳಿ ನಡೆಸಿ ಪ್ಲಾಸ್ಟಿಕ್ ಮಾರಾಟ ಹಾಗೂ ಬಳಕೆದಾರರಿಗೆ ದಂಡ ವಿಧಿಸಿ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗುತ್ತಿದೆ. ಪಾಲಿಕೆಯು ಈವರೆವಿಗೂ 253.778 ಟನ್‌ನಷ್ಟು ಪ್ಲಾಸ್ಟಿಕ್‌ನ್ನು ವಶಪಡಿಸಿಕೊಂಡು ರೂ.4.10 ಕೋಟಿಯಷ್ಟು ದಂಡ ವಿಧಿಸಲಾಗಿದೆ.<br>• ಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆ ನಿಯಮ 2016 ರನ್ನು ಪಾಲಿಸದ ಸಾರ್ವಜನಿಕರು / ಸಂಸ್ಥೆಗಳಿಗೆ ಮುನ್ಸಿಪಲ್ ಕಾರ್ಪೋರೇಷನ್ ತಿದ್ದುಪಡಿ ಕಾಯ್ದೆ, 2013 ರಂತೆ ವಾರ್ಡ್ ಮಟ್ಟದ ಅಧಿಕಾರಿಗಳಾದ ಘನತ್ಯಾಜ್ಯ/ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು/ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ದಂಡ ವಿಧಿಸುತ್ತಿದ್ದು, ನಿಯಮ ಪಾಲಿಸದ ಸಾರ್ವಜನಿಕರಲ್ಲಿ ಇನ್ನು ಹೆಚ್ಚಿನ ಶಿಸ್ತು ಮೂಡಿಸಲು ನಗರವನ್ನು ಸಂಪೂರ್ಣವಾಗಿ ಸ್ವಚ್ಛವಾಗಿಡಲು ಮತ್ತು ಸಾರ್ವಜನಿಕರಿಗೆ ದಂಡ ವಿಧಿಸುವ ಕಾರ್ಯದಲ್ಲಿ ಪಾಲಿಕೆಯ ಅಧಿಕಾರಿಗಳೊಡನೆ ಸಹಕರಿಸುವ ಸಲುವಾಗಿ ಒಟ್ಟು 231 ಜನ ನಿವೃತ್ತ ಸೇನಾ ಸಿಬ್ಬಂದಿಗಳನ್ನು ಇದೇ ಮೊದಲ ಬಾರಿಗೆ **"ಸ್ವಚ್ಛತಾ ಮಾರ್ಷಲ್ಸ್"** ಗಳನ್ನಾಗಿ ನಿಯೋಜಿಸಲಾಗಿರುತ್ತದೆ. ಸದರಿ ಮಾರ್ಷಲ್‌ಗಳ ನಿಯೋಜನೆಯಿಂದ ರೂ.92,03,150/-ಗಳಷ್ಟು ದಂಡ ವಿಧಿಸಿ, ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿರುತ್ತದೆ.<br>• ಪಾಲಿಕೆ ವ್ಯಾಪ್ತಿಯಲ್ಲಿ ಬರುವ High Density Corridor, Arterial ಮತ್ತು Sub-Arterial ರಸ್ತೆಗಳ ಪಾದಚಾರಿ, ರಸ್ತೆ ವಿಭಜಕ ಮಾರ್ಗದಲ್ಲಿ ಸಂಗ್ರಹವಾಗುವ ಕಸ, ಮಣ್ಣು ಮತ್ತು ಮರಳಿನ ಕಣಗಳಿಂದ ವಾಹನ ಸವಾರರಿಗೂ ಮತ್ತು ಪಾದಚಾರಿಗಳಿಗೂ ತೀವ್ರತರವಾದ ತೊಂದರೆಯಾಗುತ್ತಿದ್ದು, ಹಾಗೂ ಪ್ರಮುಖ ರಸ್ತೆಗಳ ಸ್ವಚ್ಛತೆಗೆ ಪೌರಕಾರ್ಮಿಕರುಗಳನ್ನು ನಿಯೋಜಿಸಿದ್ದಲ್ಲಿ ವಾಹನಗಳ ದಟ್ಟಣೆಯ ಸಂಚಾರದಿಂದ ಪೌರಕಾರ್ಮಿಕರುಗಳ ಆರೋಗ್ಯ ಮತ್ತು ಅಪಘಾತಗಳಾಗುವ ಸಂಭವವಿರುತ್ತದೆ. ಆದಕಾರಣ, ಸಾರ್ವಜನಿಕರ ಆರೋಗ್ಯ, ಪರಿಸರ |

| | | |
|---|---|---|
| | | ಮಾಲಿನ್ಯ ತಡೆಗಟ್ಟುವ ಹಿತದೃಷ್ಟಿಯಿಂದ ರಾತ್ರಿ ವೇಳೆಯಲ್ಲಿ ರಸ್ತೆಗಳ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಲು 24 ಯಾಂತ್ರಿಕ ಕಸ ಗುಡಿಸುವ ಯಂತ್ರಗಳನ್ನು ಖರೀದಿಸಲಾಗಿರುತ್ತದೆ.<br>• ಕಟ್ಟಡ ಮತ್ತು ಭಗ್ನಾವಶೇಷ ತ್ಯಾಜ್ಯವನ್ನು ನಿರ್ವಹಣೆ ಮಾಡಲು ನಿಯಮಗಳನ್ನು ರೂಪಿಸಲಾಗಿರುತ್ತದೆ.<br>• ಕಟ್ಟಡ ಮತ್ತು ಭಗ್ನಾವಶೇಷ (Construction and Demolition waste) ತ್ಯಾಜ್ಯವನ್ನು ಸಂಸ್ಕರಿಸಿ ಉಪಯುಕ್ತ ವಸ್ತುಗಳನ್ನು ಪುನರ್ ಬಳಕೆ ಮಾಡಿಕೊಳ್ಳುವ ಘಟಕ ಸ್ಥಾಪನೆಗಾಗಿ ಈಗಾಗಲೇ ಪಾಲಿಕೆಯು M/s. Rock Crystals ಸಂಸ್ಥೆಯವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಕಣ್ಣೂರು ಗ್ರಾಮದ ಸರ್ವೆ ಸಂ : 50 ರಲ್ಲಿ 10 ಎಕರೆ ಜಾಗವನ್ನು ಹಸ್ತಾಂತರಿಸಿರುತ್ತದೆ.<br>• ಇದಲ್ಲದೇ, M/s Rock Crystals ಸಂಸ್ಥೆಯವರು ಚಿಕ್ಕಜಾಲದಲ್ಲಿರುವ ತಮ್ಮದೇ ಸ್ವಂತ ಜಾಗದಲ್ಲಿ ನಿರ್ಮಿಸಿರುವ ಕಟ್ಟಡ ಭಗ್ನಾವಶೇಷ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಕಟ್ಟಡ ಮತ್ತು ಭಗ್ನಾವಶೇಷ ವಿಲೇವಾರಿ ಮಾಡಲು ಕಟ್ಟಡ ತ್ಯಾಜ್ಯ ಉತ್ಪಾದಕರಿಗೆ ಸೂಚಿಸಿ, ಸಾರ್ವಜನಿಕ ಪ್ರಕಟಣೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುತ್ತದೆ.<br>• ತ್ಯಾಜ್ಯ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಪಾಲಿಕೆಯ ವಿವಿಧ 50 ವಾರ್ಡ್‌ಗಳಲ್ಲಿ ಸಣ್ಣ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>• 100 ಉದ್ಯಾನವನಗಳಲ್ಲಿ ಎಲೆಗಳಿಂದ ಸಣ್ಣ ಪ್ರಮಾಣದ ಗೊಬ್ಬರ ತಯಾರಿಸುವ ಘಟಕಗಳನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗಿರುತ್ತದೆ.<br>• ಇದಲ್ಲದೆ, ತ್ಯಾಜ್ಯದಿಂದ ವಿದ್ಯುತ್ ಶಕ್ತಿ ಉತ್ಪಾದಿಸಲು ಸರ್ಕಾರವು ದೊಡ್ಡಬಿದರಕಲ್ಲು, ಚಿಕ್ಕನಾಗಮಂಗಲ, ಮಂಡೂರು ಘಟಕಗಳಲ್ಲಿ ವಿದ್ಯುತ್ ಉತ್ಪಾದಿಸುವುದಕ್ಕೆ ಸಂಬಂದಿಸಿದಂತೆ ಬಿಬಿಎಂಪಿ ಸಲ್ಲಿಸಿರುವ ಈ ಕೆಳಕಂಡ ಪ್ರಸ್ತಾವನೆಗಳಿಗೆ ಸರ್ಕಾರವು ಅನುಮೋದನೆ ನೀಡಿರುತ್ತದೆ.<br><br>**1.** ಸರ್ಕಾರದ ಆದೇಶ ಸಂಖ್ಯೆ: ನಅಇ 540 ಎಂಎನ್ ವೈ 2018, ದಿನಾಂಖ: 08-03-2018ರಲ್ಲಿ ಬಿಬಿಎಂಪಿ ವ್ಯಾಪ್ತಿಯ ಚಿಕ್ಕನಾಗಮಂಗಲ ಘನ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ 500 ಮೆ.ಟನ್ ಘನ ತ್ಯಾಜ್ಯದಿಂದ ವಿದ್ಯುತ್ ಶಕ್ತಿ ಉತ್ಪಾದಿಸಲು **M/S 3 Wayste SAS France Company** |

| | | |
|---|---|---|
| | | ಕಂಪನಿಗೆ ಅನುಮೋದನೆ ನೀಡಲಾಗಿದೆ.<br><br>**2.** ಸರ್ಕಾರದ ಆದೇಶ ಸಂಖ್ಯೆ: ನಅಇ 285 ಎಂಎನ್‌ವೈ 2014, ದಿನಾಂಕ: 19-08-2019ರಲ್ಲಿ **ಮೆ॥ ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್** ಸಂಸ್ಥೆಯವರಿಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿರುವ ಕನ್ನಹಳ್ಳಿಯಲ್ಲಿನ 5 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಿರುವ ಶೆಡ್ ಮತ್ತು ಉಳಿದ 15 ಎಕರೆ ಒಟ್ಟು 20 ಎಕರೆ ಜಾಗವನ್ನು 30 ವರ್ಷಗಳ ಅವಧಿಗೆ "ಉಪಯೋಗಕ್ಕೆ ಮಾತ್ರ (Permissive use only)" ಆಧಾರದ ಮೇಲೆ ನೀಡಲು ಅನುಮೋದನೆ ನೀಡಿದೆ.<br><br>3. ಸರ್ಕಾರದ ಆದೇಶ ಸಂಖ್ಯೆ: ನಅಇ 504 ಎಂಎನ್‌ವೈ 2017, ದಿನಾಂಕ: 24-03-2018 ರಲ್ಲಿ ಬಿಬಿಎಂಪಿಯ ದೊಡ್ಡಬಿದರಕಲ್ಲು ಘನತ್ಯಾಜ್ಯ ಸಂಸ್ಕರಣಾ ಘಟಕದ ಜಾಗದಲ್ಲಿ ಪ್ರತಿ ದಿನ 50 ರಿಂದ 100 ಮೆಟ್ರಿಕ್ ಟನ್ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಲು **M/S Indium Project Pvt Ltd** ಇವರಿಗೆ 20 ವರ್ಷಗಳ ಅವಧಿಗೆ "ಉಪಯೋಗಕ್ಕೆ ಮಾತ್ರ (Permissive use only)" ಆಧಾರದ ಮೇಲೆ ನೀಡಲು ಅನುಮೋದನೆ ನೀಡಿದೆ.<br>4. ಸರ್ಕಾರದ ಆದೇಶ ಸಂಖ್ಯೆ: ನಅಇ 405 ಎಂಎನ್‌ವೈ 2016, ದಿನಾಂಕ: 11-11-2019 ರಲ್ಲಿ ಬಿಬಿಎಂಪಿಯ ವ್ಯಾಪ್ತಿಯಲ್ಲಿರುವ ಮಾವಳ್ಳಿಪುರದ ಘನತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಈಗಾಗಲೇ ಭೂಭರ್ತಿ/ಶೇಖರಣೆಯಾಗಿರುವ ಹಳೆಯ ತ್ಯಾಜ್ಯವನ್ನು ಹೊರತೆಗೆಯುವ ಜೊತೆಗೆ ಘನತ್ಯಾಜ್ಯದಿಂದ ವಿದ್ಯುತ್‌ನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು **M/S NEG Company** ಗೆ ಸುಮಾರು 25 ವರ್ಷಗಳ ಅವಧಿಗೆ ನೀಡಲು ಸರ್ಕಾರದ ಅನುಮೋದನೆ ನೀಡಿದೆ.<br>**5.** ಬಿಬಿಎಂಪಿಯು ಮಾವಳ್ಳಿಪುರದಲ್ಲಿನ ಪಾಲಿಕೆಯ ಜಾಗವನ್ನು **Compressed Natural Gas (CNG)** ಉತ್ಪಾದಿಸುವ ಘಟಕವನ್ನು **M/S Firm Green California USA** ಕಂಪನಿಯ ವತಿಯಿಂದ ಸ್ಥಾಪಿಸಲು ಅನುಮೋದನೆ ನೀಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.<br>**6.** ಬಿಬಿಎಂಪಿಯು **M/S Essel Infra Projects Company DBFOT** ಆಧಾರದ ಮೇಲೆ ಘನತ್ಯಾಜ್ಯ ನಿರ್ವಹಣಾ ಘಟಕವನ್ನು ಸ್ಥಾಪಿಸಲು ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ |

| | | |
|---|---|---|
| | | ಹೋಬಳಿ ಗಿಡ್ಡೇನಹಳ್ಳಿ ಗ್ರಾಮದ ಸರ್ವೆ ನಂ. 80ರಲ್ಲಿ ನೀಡಿರುವ ಜಾಗದ ಬದಲಾಗಿ ಮಾಳ್ಳಿಪುರದಲ್ಲಿನ ಪಾಲಿಕೆಯ ಸರ್ವೆ ನಂ. 8 ರಲ್ಲಿ 25 ಎಕರೆ ಜಾಗವನ್ನು ನೀಡಲು ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.<br>**7. ಕರ್ನಾಟಕ ವಿದ್ಯುತ್ ನಿಗಮ (KPC):** ಸಂಸ್ಥೆಯು 700 ಮೆ ಟನ್ ಆರ್.ಡಿ.ಎಫ್ ಮೆಟಿರಿಯಲ್ ಪ್ರತಿ ದಿವಸ ಬಿಬಿಎಂಪಿಯಿಂದ ಪಡೆದು ಬಿಡದಿಯಲ್ಲಿ 11 ಮೆಗಾ ವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡಲು ಟೆಂಡರ್ ಅಂತಿಮಗೊಳಿಸುವ ಹಂತದಲ್ಲಿರುತ್ತದೆ.<br><br>ಇದಲ್ಲದೇ, ಘನತ್ಯಾಜ್ಯ ವಿಲೇವಾರಿಯನ್ನು ಬೆಂಗಳೂರು ಹೊರವಲಯದ ಮಿಟಗಾನಹಳ್ಳಿ ಗ್ರಾಮದ ಸರ್ವೇ ಸಂಖ್ಯೆ:02 ರ ಒಟ್ಟು 06 ಎಕರೆ ಕಲ್ಲು ಕ್ವಾರಿ ಪ್ರದೇಶದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ತಜ್ಞರ ಸಲಹೆ ಸೂಚನೆಯಂತೆ ವೈಜ್ಞಾನಿಕ ಭೂಭರ್ತಿಯನ್ನು ಕೈಗೊಳ್ಳಲಾಗುತ್ತಿದೆ.<br>ಕೇಂದ್ರ ಹಾಗು ರಾಜ್ಯ ಸರ್ಕಾರ ಪುರಸ್ಕೃತ ಸ್ವಚ್ಛ ಭಾರತ ಮಿಷನ್ ಯೋಜನೆಯು, ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಕ್ಟೋಬರ್ 2014 ರಲ್ಲಿ ಜಾರಿಗೆ ಬಂದಿದ್ದು, ಮಾರ್ಚ್ -2020 ರವರೆಗೆ ಜಾರಿಯಲ್ಲಿರುತ್ತದೆ. ಸದರಿ ಯೋಜನೆಯ ಅವಧಿಯು ತದನಂತರವೂ ವಿಸ್ತರಣೆಯಾಗುವ ಸಂಭಾವ್ಯ ಇರುತ್ತದೆ.<br><br>ಸದರಿ ಯೋಜನೆಯ ಮಾರ್ಗಸೂಚಿಗಳನ್ವಯ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮಗ್ರ ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಕ್ರಮವಹಿಸಲಾಗಿದೆ.<br><br>ಮುಂದುವರೆದು, ಹೊಸದಾಗಿ ಸೃಜನೆಯಾಗಿರುವ ನಗರ ಸ್ಥಳೀಯ ಸಂಸ್ಥೆಗಳು ತ್ಯಾಜ್ಯ ಸಂಸ್ಕರಣೆ ಜಾಗ ಗುರುತಿಸುವ ಪ್ರಕ್ರಿಯೆಯಲ್ಲಿದ್ದು, ಸಂಸ್ಕರಣೆ ಜಾಗ ಗುರುತಿಸಿದ ಕೂಡಲೇ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಸಂಯೋಜಿಸಿಕೊಂಡು ಸಮಗ್ರ ಘನ ತ್ಯಾಜ್ಯ ನಿರ್ವಹಣೆ ಡಿ.ಪಿ.ಆರ್. ಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಲು ಯೋಜಿಸಲಾಗಿರುತ್ತದೆ. |

ನಅಇ 40 ಎಂಎನ್ಇ 2020(ಇ).

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು